ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/01/ಸಿಎಎಸ್/2020-21/ಬಸ್ಥಾವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 13.08.2021

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು / ಗ್ರಂಥಪಾಲಕರು / ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವೃತ್ತಿ ಪದೋನ್ನತಿ ನಿಯಮಗಳನ್ವಯ ವಿವಿಧ ಹಂತದ ಎ.ಜಿ.ಪಿ. ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : 1. ಈ ಕಛೇರಿ ದಿನಾಂಕ : 19.05.2015 ರ ಸಂಖ್ಯೆ : ಕಾಶಿಇ/27/ಸಿಎಎಸ್/ಬಸ್ಥಾವಿ/2010-11ರ ಸುತ್ತೋಲೆ.
2. ಈ ಕಛೇರಿ ದಿನಾಂಕ : 03.10.2015 ಹಾಗೂ 29.10.2015ರ ಸಂಖ್ಯೆ : ಕಾಶಿಇ/16/ಸಿಎಎಸ್/ಉಬಡ್ತಿ/ಬಸ್ಥಾವಿ/2015-16ರ ಸುತ್ತೋಲೆಗಳು.
3. ಈ ಕಛೇರಿ ದಿನಾಂಕ : 20.04.2017ರ ಸಂಖ್ಯೆ : ಕಾಶಿಇ/137/ಸಿಎಎಸ್/ಎಜಿಪಿ/2017-18/ಬಸ್ಥಾವಿ ರ ಸುತ್ತೋಲೆಗಳು.
4. ಈ ಕಛೇರಿ ದಿನಾಂಕ 01.08.2017ರ ಕಾಶಿಇ/16/ಸಿಎಎಸ್/ಉಬಡ್ತಿ/ಬಸ್ಥಾವಿ/2015-16ರ ಸುತ್ತೋಲೆ.
5. ಈ ಕಛೇರಿ ದಿನಾಂಕ : 31.01.2018 ಕಾಶಿಇ/34/ಎಜಿಪಿ/2017-18/ಬಸ್ಥಾವಿ ರ ಸುತ್ತೋಲೆ.
6. ಈ ಕಛೇರಿ ದಿನಾಂಕ 18.06.2018ರ ಕಾಶಿಇ/127/ಪ್ರಾಹುಸ್ಥ/ಬಸ್ಥಾವಿ/2016-17ರ ಸುತ್ತೋಲೆ.
7. ಸರ್ಕಾರದ ದಿನಾಂಕ : 02.03.2021ರ ಸಂಖ್ಯೆ : ಇಡಿ/123/ಡಿಸಿಇ/2020ರ ಆದೇಶ
8. ಈ ಕಛೇರಿಯ ದಿನಾಂಕ : 16.03.2021ರ ಸಮಸಂಖ್ಯೆಯ ಪರಿಚಲನಾ ಆದೇಶ.

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರುಗಳಿಗೆ ವಿವಿಧ ಹಂತದ ಸ್ಥಾನೀಕರಣಗಳನ್ನು (ಎಜಿಪಿ ರೂ.7000/-, ರೂ. 8000/-, ರೂ.9000/- ಹಾಗೂ ರೂ.10000/-) ಮಂಜೂರು ಮಾಡುವ ಸಲುವಾಗಿ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ಉಲ್ಲೇಖ (1) ರಿಂದ (6)ರ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ಸದರಿ ಸುತ್ತೋಲೆಗಳಲ್ಲಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವ ಸಂಬಂಧ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ ಹಾಗೂ ಉಲ್ಲೇಖ(7)ರಲ್ಲಿ ಸಮಗ್ರ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ ಅದರಂತೆ ಕ್ರಮವಹಿಸಲು ಪ್ರಾಂಶುಪಾಲರುಗಳಿಗೆ ಉಲ್ಲೇಖ (8) ರ ಪರಿಚಲನಾ ಆದೇಶದ ಮೂಲಕ ತಿಳಿಸಲಾಗಿರುತ್ತದೆ. ಆದಾಗ್ಯೂ ಕೆಲವು ಕಾಲೇಜುಗಳಿಂದ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳು ಅಪೂರ್ಣವಾಗಿದ್ದು, ತಪ್ಪಾದ ಮಾಹಿತಿ, ತಿದ್ದುಪಡಿ ಕೋರಿ ಪ್ರಸ್ತಾವನೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗುತ್ತಿವೆ ಹಾಗೂ ಮತ್ತೆ ಕೆಲವು ಪ್ರಸ್ತಾವನೆಗಳನ್ನು ಎಜಿಪಿ ಅರ್ಹತೆ ಪೂರೈಸುವ ದಿನಾಂಕದ ಮುನ್ನವೇ ಹಲವು ಕಾಲೇಜುಗಳ ಪ್ರಾಂಶುಪಾಲರ ಮುಖಾಂತರ ಈ ಕಛೇರಿಗೆ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

ಮುಖ್ಯವಾಗಿ ರಾಜ್ಯವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಗೊಂಡ ಅರೆಕಾಲಿಕ ಉಪನ್ಯಾಸಕರಿಗೆ ಯು.ಜಿ.ಸಿ.ಯಿಂದ ನಿಗದಿಪಡಿಸಿದ ವಿದ್ಯಾರ್ಹತೆಗಳಾದ NET/SLET/M.Phil/Ph.D. ಪದವಿಯನ್ನು ಪೂರೈಸಿದ ದಿನಾಂಕದಿಂದ ಅನ್ವಯವಾಗುವಂತೆ (From the date of acquiring the said qualification) ಯು.ಜಿ.ಸಿ. ವೇತನವನ್ನು ನಿಗದಿಪಡಿಸುವಂತೆ ಸರ್ಕಾರದ ದಿನಾಂಕ 26.12.2009ರ ಸಂಖ್ಯೆ : ಇಡಿ/37/ಯುಎನ್‌ಇ/2009ರ ಆದೇಶದಲ್ಲಿ ಹಾಗೂ ಈ ಕಛೇರಿ ದಿನಾಂಕ 29.10.2010ರ ಕಾಶಿಇ/256/ಯುಜಿಸಿ/ಸಿವಿ-1/2010ರ ಸುತ್ತೋಲೆಯಲ್ಲಿ ಸೂಚಿಸಲಾಗಿದ್ದರೂ ಸಹ ಕೆಲವು ಕಾಲೇಜುಗಳಲ್ಲಿ ಸದರಿ ಉಪನ್ಯಾಸಕರು ಎಂ.ಫಿಲ್. ಪದವಿ ಪರೀಕ್ಷೆಗೆ ಹಾಜರಾದ ದಿನಾಂಕದಿಂದ ಹಾಗೂ ಕೆಲವು ಕಾಲೇಜಿನ ಉಪನ್ಯಾಸಕರಿಗೆ ದಿನಾಂಕ : 01.01.2006 ರಿಂದ ಯು.ಜಿ.ಸಿ. ವೇತನವನ್ನು ನಿಗಧಿಪಡಿಸಿರುವುದನ್ನು ಮಹಾಲೇಖಪಾಲರು ಆಕ್ಷೇಪಿಸಿ ಅಂತಹ ಉಪನ್ಯಾಸಕರು **NET/SLET/M.Phil/Ph.D./** ಪಡೆದ ದಿನಾಂಕದಿಂದ **(Date of Issue of Certificate)** ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನವನ್ನು ಪುನರ್ ನಿಗದಿಪಡಿಸಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಡೆದು ಸೇವಾ ಪುಸ್ತಕಗಳಲ್ಲಿ ನಮೂದಿಸುವಂತೆ ತಿಳಿಸಿದರು ಸಹ ಈ ಬಗ್ಗೆ ಸಂಬಂಧಿಸಿದ ಪ್ರಾಂಶುಪಾಲರುಗಳು ಕ್ರಮವಹಿಸದೆ ಇರುವುದು ಪ್ರಸ್ತಾವನೆಗಳನ್ನು ಪರಿಶೀಲಿಸುವ ಸಮಯದಲ್ಲಿ ಕಂಡು ಬಂದಿರುತ್ತದೆ.

ಈ ಹಿನ್ನಲೆಯಲ್ಲಿ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು ಇನ್ನು ಮುಂದೆ ಎ.ಜಿ.ಪಿ. ಮಂಜೂರಾತಿಗಾಗಿ ಕಳುಹಿಸಿಕೊಡುವ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡುವ ಪೂರ್ವದಲ್ಲಿ ಸಂಬಂಧಿಸಿದ ನೌಕರರ ಸೇವಾ ಪುಸ್ತಕಗಳನ್ನು ತಪ್ಪದೇ ಕೂಲಂಕಷವಾಗಿ ಪರಿಶೀಲಿಸುವಂತೆ, **M.Phil./Ph.D** ಮೇಲೆ ಸೇವಾ ವಿನಾಯಿತಿ ಕೋರಿರುವ ಪ್ರಸ್ತಾವನೆಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರುವ ಬಗ್ಗೆ ಮತ್ತು ವಿಶೇಷ ಮುಂಗಡ ವೇತನ ಬಡ್ತಿಗಳನ್ನು ಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಗೊಂಡ ಉಪನ್ಯಾಸಕರಿಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ವಿಸ್ತರಿಸಿರುವ ಆದೇಶದ ಪ್ರತಿ/ಸೇವಾ ಪುಸ್ತಕದಲ್ಲಿ ದಾಖಲಿಸಿರುವ ಪುಟದ ಪ್ರತಿಯನ್ನು ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸಿಕೊಡುವಂತೆ ಹಾಗೂ ಕೆಳಕಂಡ ಸೂಚನೆಗಳನ್ವಯ ಕ್ರಮವಹಿಸಲು ಸೂಚಿಸಲಾಗಿದೆ.

ರೂ. 7000/- ಎ.ಜಿ.ಪಿ. ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಸಲ್ಲಿಸಬೇಕಾಗಿರುವ ದಾಖಲೆಗಳು

1. ಉಲ್ಲೇಖ (7)ರ ಆದೇಶ ಮತ್ತು (8)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ದಿನಾಂಕ 17.07.2021ರ ನಂತರದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆಯುವುದು. ಅದೇ ರೀತಿ ದಿನಾಂಕ 17.07.2021ರ ಪೂರ್ವ ಅರ್ಹರಾಗಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಬಿ ನಮೂನೆಯನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಎಜಿಪಿಗೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

2. ಪ್ರಾಂಶುಪಾಲರಿಂದ ದೃಢೀಕರಿಸಿದ ಕರ್ನಾಟಕ ಲೋಕ ಸೇವಾ ಆಯೋಗ/ ಕರ್ನಾಟಕ ಪರೀಕ್ಷಾ ಮಂಡಳಿ ಪ್ರಾಧಿಕಾರದ ನೇಮಕಾತಿ ಆದೇಶದ ಪ್ರತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ, ಪ್ರಮಾಣಪತ್ರ, ನೋಟಿಫಿಕೇಶನ್ ಪ್ರತಿಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
4. ಪ್ರಾಂಶುಪಾಲರಿಂದ ದೃಢೀಕರಿಸಿದ ಓ.ಸಿ/ಆರ್.ಸಿ. ಪೂರೈಸಿದ ಪ್ರಮಾಣ ಪತ್ರದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
5. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
6. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿದ್ದ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರವನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
7. ವೇತನ ರಹಿತ ರಜೆ, ಅಸಾಧಾರಣ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
8. ಉಳಿದಂತೆ ಉಲ್ಲೇಖ (1) ರಿಂದ (6)ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

**ರೂ. 8000/- ಎ.ಜಿ.ಪಿ. ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಸಲ್ಲಿಸಬೇಕಾಗಿರುವ ದಾಖಲೆಗಳು**

1. ಉಲ್ಲೇಖ (7)ರ ಆದೇಶ ಮತ್ತು (8)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ದಿನಾಂಕ 17.07.2021ರ ನಂತರದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಅಯ್ಕೆ-ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆಯುವುದು. ಅದೇ ರೀತಿ ದಿನಾಂಕ 17.07.2021ರ ಪೂರ್ವ ಅರ್ಹರಾಗಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಬಿ ನಮೂನೆಯನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಎಜಿಪಿಗೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ಕರ್ನಾಟಕ ಲೋಕ ಸೇವ ಆಯೋಗ/ ಕರ್ನಾಟಕ ಪರೀಕ್ಷಾ ಮಂಡಳ ಪ್ರಾಧಿಕಾರದ ನೇಮಕಾತಿ ಆದೇಶದ ಪ್ರತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ, ಪ್ರಮಾಣಪತ್ರ, ನೋಟಿಫಿಕೇಶನ್ ಪ್ರತಿಯನ್ನು ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
4. ಪ್ರಾಂಶುಪಾಲರಿಂದ ದೃಢೀಕರಿಸಿದ ಆರ್.ಸಿ. ಪೂರೈಸಿದ ಪ್ರಮಾಣ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
5. ರೂ. 7000/- ಎ.ಜಿ.ಪಿ. ಮಂಜೂರಾತಿ ಆದೇಶದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

6. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು..

7. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿದ್ದ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರವನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

8. ವೇತನ ರಹಿತ ರಜೆ, ಅಸಾಧಾರಣ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.

9. ಉಳಿದಂತೆ ಉಲ್ಲೇಖ (1) ರಿಂದ (6)ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

## ರೂ. 9000/- ಎ.ಜಿ.ಪಿ.(ಸಹ ಪ್ರಾಧ್ಯಾಪಕರು) ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಸಲ್ಲಿಸಬೇಕಾಗಿರುವ ದಾಖಲೆಗಳು

1. ಉಲ್ಲೇಖ (7)ರ ಆದೇಶ ಮತ್ತು (8)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ದಿನಾಂಕ 17.07.2021ರ ನಂತರದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆಯುವುದು. ಅದೇ ರೀತಿ ದಿನಾಂಕ 17.07.2021ರ ಪೂರ್ವ ಅರ್ಹರಾಗಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಬಿ ನಮೂನೆಯನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಎಜಿಪಿಗೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ನೇಮಕಾತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ, ಪ್ರಮಾಣಪತ್ರ, ನೋಟಿಫಿಕೇಶನ್‌ನ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
4. ಹಿರಿಯ ವೇತನ ಶ್ರೇಣಿ/ರೂ.7000/- ಎಜಿಪಿ ಹಾಗೂ ರೂ.8000/- ಎ.ಜಿ.ಪಿ. ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
5. ರೂ.8000/- ಆಯ್ಕೆ ವೇತನ ಶ್ರೇಣಿ ಮಂಜೂರಾದ ನಂತರ ಪೂರೈಸಿರುವ 01 ವಾರದ ತರಬೇತಿಗಳ ಬಗ್ಗೆ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
6. ತಾವು ಪ್ರಕಟಿಸಿರುವ 03 ಲೇಖನಗಳ ಬಗ್ಗೆ ನಮೂದಿಸಿರುವ ISSN/ISBN No. ಅನ್ನು ಒಳಗೊಂಡಂತೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
7. ಎ.ಪಿ.ಐ. ಗ್ರೇಡಿಂಗ್/ಸ್ಕೋರಿಂಗ್‌ಗೆ ಸಂಬಂಧಿಸಿದಂತಹ ದಾಖಲೆಗಳು ಹಾಗೂ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರಿಗೆ ನೀಡಲಾಗಿರುವ ಅಂಕಗಳನ್ನೊಳಗೊಂಡ "Screening-cum-

Evaluation Committee" ಸಭೆಯ ನಡವಳ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.

8. ಮೇಲ್ಕಂಡ ಎಲ್ಲಾ ದಾಖಲೆಗಳ ಒಂದು ಸೆಟ್ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದ ವೇಳೆ ಸಲ್ಲಿಸತಕ್ಕದ್ದು.
9. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿ.
10. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿದ್ದ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
11. ವೇತನ ರಹಿತ ರಜೆ, ಅಸಾಧಾರಣೆ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
12. ಉಳದಂತೆ ಉಲ್ಲೇಖ (1) ರಿಂದ (6)ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಸಲಾಗಿದೆ

<u>ರೂ. 10000/- ಎ.ಜಿ.ಪಿ(ಪ್ರಾಧ್ಯಾಪಕರು). ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಸಲ್ಲಿಸಬೇಕಾಗಿರುವ ದಾಖಲೆಗಳು</u>

1. ಉಲ್ಲೇಖ (7)ರ ಆದೇಶ ಮತ್ತು (8)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ದಿನಾಂಕ 17.07.2021ರ ನಂತರದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಅಯ್ಕೆ-ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆಯುವುದು. ಅದೇ ರೀತಿ ದಿನಾಂಕ 17.07.2021ರ ಪೂರ್ವ ಅರ್ಹರಾಗಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಅಯ್ಕೆ-ಬಿ ನಮೂನೆಯನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಎಜಿಪಿಗೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ನೇಮಕಾತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಅಂಕಪಟ್ಟಿ, ಪ್ರಮಾಣಪತ್ರ, ನೋಟಿಫಿಕೇಶನ್‌ನ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
4. ರೂ.7000/-, ರೂ.8000/- ಹಾಗೂ ರೂ.9000/- ಎ.ಜಿ.ಪಿ. ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
5. ತಾವು ಪ್ರಕಟಿಸಿರುವ 10 ಲೇಖನಗಳ ಬಗ್ಗೆ ನಮೂದಿಸಿರುವ ISSN/ISBN No. ಅನ್ನು ಒಳಗೊಂಡಂತೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರತಿಗಳನ್ನು ಪ್ರಸ್ತಾವನೆಯ ಜೊತೆಯಲ್ಲಿ ಲಗತ್ತಿಸಿ ಕಳುಹಿಸುವುದು.

6. ಎ.ಪಿ.ಐ. ಗ್ರೇಡಿಂಗ್/ಸ್ಕೋರಿಂಗ್‌ಗೆ ಸಂಬಂಧಿಸಿದಂತಹ ದಾಖಲೆಗಳು ಹಾಗೂ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರಿಗೆ ನೀಡಲಾಗಿರುವ ಅಂಕಗಳನ್ನೊಳಗೊಂಡ "Screening-cum-Evaluation Committee"ಸಭೆಯ ನಡವಳ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
7. ಮೇಲ್ಕಂಡ ಎಲ್ಲಾ ದಾಖಲೆಗಳ ಒಂದು ಸೆಟ್ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದ ವೇಳೆ ಸಲ್ಲಿಸತಕ್ಕದ್ದು.
8. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
9. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿದ್ದ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರದ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
10. ವೇತನ ರಹಿತ ರಜೆ, ಅಸಾಧಾರಣ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
11. ಉಳಿದಂತೆ ಉಲ್ಲೇಖ (1) ರಿಂದ (6)ರ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

13/8/21

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ:

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮೇಲ್ಕಂಡ ಸುತ್ತೋಲೆಯನ್ನು ತಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರ ಗಮನಕ್ಕೆ ತರುವಂತೆ ಹಾಗೂ ಇನ್ನು ಮುಂದೆ ಉನ್ನತ ಎ.ಜಿ.ಪಿ.ಗೆ ಪ್ರಸ್ತಾವನೆ ಕಳುಹಿಸುವ ಪೂರ್ವದಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಪ್ರತಿಯನ್ನು :

1. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಂಬಂಧದಲ್ಲಿ ಸೂಕ್ತ ಕ್ರಮಕ್ಕೈಗೊಳ್ಳುವಂತೆ ತಿಳಿಸಲಾಗಿದೆ.
2. ಕಛೇರಿ ಪ್ರತಿ.